(ಒ) ಹೊರಗೋಡೆಯ ಗಚ್ಚು ಗಾರೆಯನ್ನು ತೆಗೆದು ಬೇರೆಯಾಗಿ ಹಾಕುವುದು ಹಾಗೂ ವಾಸ್ತು ಶಿಲ್ಪದ ಭಾಗಗಳನ್ನು (ಆರ್ಕಿಟೆಕ್ಚರಲ್ ಪೀಚರ್ಸ್) ಸರಿಪಡಿಸುವುದು.

(೭) ಅವಶ್ಯವಿರುವ ಕಡೆ ವಾಲ್ ಫೇನಲಿಂಗ್, ಹವಾನಿಯಂತ್ರಣ, ಕೋರ್ಟ್ ಹಾಲ್‌ಗಳಿಗೆ ಕೊಠಡಿಗಳಿಗೆ ಪೀಠೋಪಕರಣಗಳು, ಇವನ್ನು ಒದಗಿಸುವುದು.

(೮) ಹೊಸದಾಗಿ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕಗಳನ್ನು ಒದಗಿಸುವುದು.

(೯) ನವೀಕರಣ ಕಾರ್ಯಕ್ಕೆ ಹಾಗೂ ಮೂಲಕಾರ್ಯಕ್ಕೆ ವ್ಯತ್ಯಾಸವಿರುವುದರಿಂದ ಹಾಗೂ ನವೀಕರಣ ಕಾರ್ಯ ನಡೆಯುತ್ತಿರುವ ಹಾಗೆಯೇ ಕೋರ್ಟು ಕಚೇರಿಗಳು ಸದರೀ ಕಟ್ಟಡದಲ್ಲಿಯೇ ನಡೆಯಬೇಕಾಗಿರುವ ಕಾರಣ, ಈ ಕಾರ್ಯವನ್ನು ಮುಗಿಸಲು ಅವಧಿಯನ್ನು ನಿಗಧಿಪಡಿಸುವುದೂ ಸಾಧ್ಯವಿಲ್ಲ. ಉಳಿಕೆ ಕಾರ್ಯವನ್ನು ಉಚ್ಚ ನ್ಯಾಯಾಲಯದ ಅಧಿಕಾರ ವರ್ಗವು ಕಟ್ಟಡವನ್ನು ನವೀಕರಣಗೊಳಿಸುವ ಸಮಯದಲ್ಲಿ ತೆರವು ಮಾಡಿಕೊಡುವುದು ಮತ್ತು ಆನುದಾನ ಸಿಕ್ಕುವುದನ್ನು ಆಧರಿಸಿ ಸುಮಾರು ಒಂದು ವರ್ಷದಲ್ಲಿ ಮುಗಿಸಲಾಗುವುದು.

ಮೈಸೂರು ಅರಮನೆ ಮತ್ತು ವಸ್ತು ಸಂಗ್ರಹಾಲಯ

೫೧೯. ಶ್ರೀ ಎ. ಕೃಷ್ಣಪ್ಪ (ವರ್ತೂರು),—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಮೈಸೂರು ಅರಮನೆ ಮತ್ತು ಸಂಗ್ರಹಾಲಯವನ್ನು ೧೯೮೯-೯೦ರಲ್ಲಿ ವೀಕ್ಷಿಸಲು ಬಂದವರ ಸಂಖ್ಯೆ ಎಷ್ಟು ? ಹಾಗೂ ಅವರಿಂದ ಸಂದಾಯವಾದ ಶುಲ್ಕವೆಷ್ಟು ?

(ಆ) ಮೈಸೂರು ಅರಮನೆ ನವೀಕರಣ, ಇನ್ನಿತರ ಬಾಬ್ತುಗಳಿಗಾಗಿ ೧೯೮೯-೯೦ ರಲ್ಲಿ ಖರ್ಚಾದ ಹಣ ವೆಷ್ಟು ?

(ಇ) ಮೈಸೂರು ಅರಮನೆ ವಸ್ತು ಸಂಗ್ರಹಾಲಯದ ಸಿಬ್ಬಂದಿಗಾಗಿ ೧೯೮೯-೯೦ ರಲ್ಲಿ ಆದ ಖರ್ಚು ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

(ಅ) ವೀಕ್ಷಿಸಲು ಬಂದವರ ಸಂಖ್ಯೆ : ೧೯,೮೫,೯೨೮
ಸಂದಾಯವಾದ ಶುಲ್ಕ ರೂ. ೪೯,೧೯,೫೮೨-೦೦

(ಆ) ರೂ. ೩೬,೨೬,೭೪೩-೧೫

(ಇ) ರೂ. ೨೫,೨೩,೫೧೨-೩೮

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮ

೫೨೧. ಶ್ರೀ ಎ. ಕೃಷ್ಣಪ್ಪ (ವರ್ತೂರು):—ಮಾನ್ಯ ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಸಾರಿಗೆ ವ್ಯವಸ್ಥೆಯಿಂದಾಗಿ ೧೯೮೯-೯೦ರಲ್ಲಿ ಬಂದ ಲಾಭವೆಷ್ಟು ?

ಆ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್ ಉದ್ಯಮದಿಂದ ೧೯೮೯-೯೦ರಲ್ಲಿ ಬಂದ ಲಾಭವೆಷ್ಟು ?

ಇ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಸತಿ ಗೃಹಗಳಿಂದಾಗಿ ೧೯೮೯-೯೦ರಲ್ಲಿ ಬಂದ ಆದಾಯವೆಷ್ಟು ?

ಈ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಸಿಬ್ಬಂದಿ ವರ್ಗದವರಿಗಾಗಿ ೧೯೮೯-೯೦ರಲ್ಲಿ ಸಂಬಳ ಮತ್ತಿತರೇ ಭತ್ಯೆಗಳಿಗಾಗಿ ಆದ ಖರ್ಚು ಎಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಯೋಜನೆ ಪ್ರವಾಸೋದ್ಯಮ ಸಚಿವರು).—

ಅ) ಅಂದಾಜು ರೂ. ೧೬.೬೭ ಲಕ್ಷ.

ಆ) ಅಂದಾಜು ರೂ. ೧೦.೨೫ ಲಕ್ಷ

ಇ) ವಸತಿಗೃಹಗಳಿಂದ ಮತ್ತು ಹೋಟೆಲು ಉದ್ಯಮಂದಿಂದ ಒಟ್ಟು ರೂ. ೧೯೪.೬೫ ಲಕ್ಷಗಳಂ (ಅಂದಾಜು)

ಈ) ಅಂದಾಜು ರೂ. ೯೯.೫೧ ಲಕ್ಷ;

ಕಬಿನಿ ಡ್ಯಾಮ್ ಬಳಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರಂ ಕಾಟೇಜ್‌ಗಳನ್ನ್ ಕಟ್ಟುವ ಬಗ್ಗೆ,

೨೦೫ ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಯೋಜನೆ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಡ್ಯಾಮ್ ಬಳಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಕಾಟೇಜ್‌ಗಳನ್ನು ಕಟ್ಟುವ ಉದ್ದೇಶ ಹೊಂದಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳ ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು).

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಸಾವನದುರ್ಗವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಕುರಿತಂ.

೬೮೭ ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಯೋಜನಾ, ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಮಾಗಡಿ ತಾಲ್ಲೂಕಿನಲ್ಲಿರುವ ಸಾವನದುರ್ಗ ಒಂದು ಅತ್ಯುತ್ತಮ ಪ್ರೇಕ್ಷಣೀಯ ಸ್ಥಳ ವೆಂಬುದು ಸರ್ಕಾರಕ್ಕೆ ತಿಳಿದಿದೆಯೆ?

೨) ಹಾಗಿದ್ದಲ್ಲಿ, ಸಾವನದುರ್ಗವನ್ನು ಪ್ರವಾಸಿಗರ ಸ್ಥಳವನ್ನಾಗಿ ಮಾಡಲು ಸರ್ಕಾರದವರಂ ಕ್ರಮ ತೆಗೆದುಕೊಳ್ಳುವರೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).—

೧) ತಿಳಿದಿದೆ.

೨) ಈ ಕ್ಷೇತ್ರವನ್ನು ಈಗಾಗಲೇ ಪ್ರವಾಸಿ ಸ್ಥಳವೆಂದು ಗುರುತಿಸ ಲಾಗಿದೆ ಮತ್ತು ಪ್ರವಾಸೋದ್ಯಮ ಇಲಾಖೆಯು ಹೊರ ತಂದಿರುವ 'ಬೆಂಗಳೂರಿನಸುತ್ತಮುತ್ತ' ಮಡಿಕೆಯಲ್ಲಿ ಈ ಸ್ಥಳವನ್ನು ಅಳವಡಿಸಿ ಪ್ರಚಾರ ಮಾಡಲಾಗಿದೆ.